**ಓ ಎಸ್ ನಂಃ 300/2018**
**ಪಿ ಡಬ್ಲ್ಯೂ ಃ 1**

**ದಿಃ 09.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ವಿ ಕೆ ವಕೀಲರಿಂದಃ-**

ನಿ ಪಿ 9 ರಿಂದ 15 ರ ದಾಖಲಾತಿಗಳನ್ನು ನಾನು ಪ್ರತಿವಾದಿಗಳಿಂದ ನಿಪಿ 1 ರ ದಾಖಲಾತಿಯನ್ನು ಮಾಡಿಕೊಂಡ ದಿನಾಂಕದಂದು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳನ್ನು ತಾವು ಈ ದಾವೆಯನ್ನು ಹೂಡುವ ಕಾಲಕ್ಕೆ ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಹಾಜರುಪಡಿಸಲು ಕೇಳಿರುವುದಿಲ್ಲ ಆದ್ದರಿಂದ ಹಾಜರುಪಡಿಸಿರುವುದಿಲ್ಲ. ತಾವು ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕುಗಳು ಸಾಲವನ್ನು ಕೊಡಬೇಕಾದರೆ ಮೂಲ ದಾಖಲಾತಿಗಳನ್ನು ಅಡಮಾನ ಮಾಡಿಕೊಂಡು ಸಾಲವನ್ನು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುವ ಸಮಯದಲ್ಲಿ ದಾಖಲಾತಿಗಳ ನಕಲು ಪ್ರತಿಗಳನ್ನು ಪಡೆದುಕೊಳ್ಳುತ್ತಾರೆ ಹೊರತು ಮೂಲ ದಾಖಲಾತಿಗಳನ್ನು ಪಡೆದುಕೊಳ್ಳುವುದಿಲ್ಲ. ಕ್ರಯ ಪತ್ರಗಳನ್ನು ಮಾಡಿಸಿಕೊಳ್ಳುವ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನಿಪಿ 11 ರಿಂದ 14 ರ ಕಂದಾಯ ರಶೀದಿಗಳನ್ನು ತಮಗೆ ನೀಡುವ ಸಮಯದಲ್ಲಿಯೇ ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾನಪತ್ರದ ಮೂಲ ಪ್ರತಿಯನ್ನು ನೀಡಿರುತ್ತಾರೆ ಎಂದರೆ ಸರಿ. ಲಿಖಿತ ಹೇಳಿಕೆಗೆ ಪ್ರತಿವಾದಿಗಳು ತಿದ್ದುಪಡಿ ಮಾಡಿಕೊಂಡ ನಂತರ ನಿಪಿ 11 ರಿಂದ 19 ರ ದಾಖಲಾತಿಗಳನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ನಮಗೆ ಕೇಳಿರುವುದಿಲ್ಲ ಆದ್ದರಿಂದ ಹಾಜರುಪಡಿಸಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾನ ಪತ್ರದ ಮೂಲ ಪ್ರತಿ ತಮ್ಮ ಬಳಿ ಇದ್ದರೂ ಸಹ ತಾವು ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ದಾಖಲಾತಿಯು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ದಾಖಲಾತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಪ್ರತಿವಾದಿಗಳ ತಾಯಿಗೆ ಸೇರಿದ ಸ್ವತ್ತಾಗಿರುತ್ತದೆ. ದಾವಾ ಸ್ವತ್ತು ಪ್ರತಿವಾದಿಗಳ ತಂದೆಯ ಆಸ್ತಿ ಆದ ಕಾರಣ ಪ್ರತಿವಾದಿಗಳ ತಾಯಿಗೆ ದಾನ ಮಾಡಲು ಬರುವುದಿಲ್ಲ

**ಓ ಎಸ್ ನಂಃ 300/2018**

**ಪಿ ಡಬ್ಲ್ಯೂ ಃ 1**

ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಹಾಜರಿದ್ದು 1 ನೇ ಪ್ರತಿವಾದಿಯ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**